ಇಂದು ದಿಃ**06-02-2026** ರಂದು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಬಿ.ಎಸ್ ವಕೀಲರಿಂದ ವಾದಿಗಳ ಪರಃ**

ನನ್ನ ತಂದೆ ಈಗ 2 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ನನ್ನ ತಂದೆ ಜೀವಂತ ಇದ್ದಾಗ ಯಾವುದೇ ಪಾಲುವಿಭಾಗ ಆಗಿಲ್ಲ ಎಂದರೆ ಸಾಕ್ಷಿ ಪಂಚಾಯಿತಿಯಲ್ಲಿ ಆಗಿದೆ ಎಂದು ಹೇಳುತ್ತಾರೆ. ಸರ್ವೆ ನಂಬರ್ 33/9 ಈಗಲೂ ನನ್ನ ತಂದೆಯ ಹೆಸರಿಗೆ ಇದೆ ಎಂದರೆ ಸರಿ. ಅದೇ ರೀತಿ ಸರ್ವೆ ನಂಬರ್ 33/4 ಮತ್ತು 37/3 ಪಿ1 ನನ್ನ ತಂದೆಯ ಹೆಸರಿಗೆ ಇವೆ ಎಂದರೆ ಸರಿ. ಈ ಐಟಂ ನಂಬರ್ 1 ರಿಂದ 3 ಆಸ್ತಿಗಳಿಗೆ ನಮ್ಮ ನಮ್ಮ ಹೆಸರಿನಲ್ಲಿ ಖಾತೆ ಬದಲಾವಣೆ ಆಗಿಲ್ಲ ಎಂದೆ ಸರಿ. ಸಾಕ್ಷಿ ಆದರೆ ಪಂಚಾಯಿತಿ ಆಗಿದೆ ಎಂದು ಹೇಳುತ್ತಾರೆ. ನಾನು ಹೇಳುವ ಮೌಖಿಕ ಪಾಲುವಿಭಾಗದ ಪ್ರಕಾರ ಸಹ ಯಾವುದೇ ಖಾತೆ ಬದಲಾಣೆಯಾಗಿಲ್ಲ ಎಂದರೆ ಸರಿ.

ಸರ್ವೆ ನಂಬರ್ 339/5 ಇದು ನನ್ನ ಹೆಂಡತಿಯ ಹೆಸರಿನಲ್ಲಿ ಇದೆ. ನನ್ನ ಹೆಂಡತಿ ಗೃಹಿಣಿ. ಈ ಜಮೀನನ್ನು ನಾನು ನನ್ನ ಹೆಂಡತಿಯ ಹೆಸರಿನಲ್ಲಿ 2016 ರಲ್ಲಿ ಖರೀದಿ ಮಾಡಿದ್ದೇನೆ ಎಂದರೆ ಸರಿ. ಈ ಜಮೀನನ್ನು ನಾನು ಒಟ್ಟು ಕುಟುಂಬದ ಆದಾಯದಿಂದ ಖರೀದಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಕೋಡಿಹಾಳ್ ಹೊಸಪೇಟೆಯಲ್ಲಿ ಇರುವ ಮನೆಯನ್ನು ನಾನು ಬ್ಯಾಂಕ್ ನ ಸಾಲ ಮಾಡಿ ಖರೀದಿ ಮಾಡಿರುತ್ತೇನೆ. 2018 ರಲ್ಲಿ ಈ ಮನೆ ಖರೀದಿ ಮಾಡಿದ್ದೇನೆ. ನಾನು ಸಾಲ ಮಾಡಿದ ಬಗ್ಗೆ ಈ ದಾವೆಯಲ್ಲಿ ದಾಖಲೆಗಳನ್ನು ಹಾಕಿದ್ದೇನೆ.

ಶೆಡ್ಯೂಲ್ ಬಿ ಐಟಂ ನಂಬರ್ 1 ಆಸ್ತಿ ನನ್ನ ತಂದೆಗೆ ಸೇರಿದ್ದು ಎಂದರೆ ಸರಿ. 2 ನೇ ಪ್ರತಿವಾದಿ ನನ್ನ ಅಕ್ಕ. ನನ್ನ ತಂದೆ ಮಾಡಿಕೊಟ್ಟಿದ್ದಾರೆ ಎಂದು ಹೇಳುವ

ದಾನಪತ್ರಕ್ಕೆ ನನ್ನ ತಂದೆಯ ಯಾವ ಮಕ್ಕಳ ಒಪ್ಪಿಗೆ ಸಹಿಯೂ ಇಲ್ಲ ಎಂದರೆ ಗೊತ್ತಿಲ್ಲ. ಈ ಮನೆ ಪಿತ್ರಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಸಾಕ್ಷಿ ನನ್ನ ತಂದೆ 1983 ರಲ್ಲಿ ಖರೀದಿ ಮಾಡಿದ್ದು ಎಂದು ಹೇಳುತ್ತಾರೆ. ಹಾಲಪ್ಪ ಬಣಕಾರ್ ಎನ್ನುವವರಿಂದ ಖರೀದಿ ಮಾಡಿದ್ದರು. ಸದರಿ ಕ್ರಯಪತ್ರವನ್ನು ಈ ದಾವೆಯಲ್ಲಿ ಹಾಜರುಪಡಿಸಿದ್ದೇನೆ. ನನ್ನ ತಂದೆಗೆ ಈ ಮನೆಯನ್ನು ದಾನಪತ್ರ ಮಾಡಿಕೊಡುವ ಯಾವುದೇ ಸಂಪೂರ್ಣ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ವಾದಿಗೆ ಹಿಸ್ಸೆಕೊಡಬಾರದು ಎಂದು ಸದರಿ ದಾನಪತ್ರವನ್ನು ಸೃಷ್ಠಿ ಮಾಡಿದ್ದೇವೆ ಎಂದರೆ ಸರಿಯಲ್ಲ.

ಪ್ರತಿವಾದಿಯರು, ನಾವೆಲ್ಲಾ ಒಬ್ಬರಿಗೊಬ್ಬರು ಚೆನ್ನಾಗಿ ಇದ್ದೇವೆ ಎಂದರೆ ಸಾಕ್ಷಿ ಅವರವರ ಪಾಡಿಗೆ ಇದ್ದೇವೆ ಎಂದು ಹೇಳುತ್ತಾರೆ. ಈ ಶೆಡ್ಯೂಲ್ ಎ ಐಟಂ ನಂಬರ್ 4 ಆಸ್ತಿ ಇದನ್ನು ಒಟ್ಟು ಕುಟುಂಬದ ಆದಾಯದಿಂದ ಖರೀದಿ ಮಾಡಿರುವ ಕಾರಣ, ಎಲ್ಲರಿಗೂ ಸಮನಾದ ಹಿಸ್ಸೆ ಇದೆ ಎಂದರೆ ಸರಿಯಲ್ಲ. ಈ ಜಮೀನನ್ನು ಖರೀದಿ ಮಾಡುವ ಸಮಯದಲ್ಲಿ ನನಗೆ ಅಷ್ಟು ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಆಸ್ತಿ ಖರೀದಿ ಮಾಡುವ ಸಮಯದಲ್ಲಿ, ಸರ್ಕಾರಿ ನೌಕರ ಇರುವ ಕಾರಣ, ಯಾವುದೇ ಪೂರ್ವಾನುಮತಿ ಪಡೆದಿರಲಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ದಾಖಲೆಗಳು ಶೆಡ್ಯೂಲ್ ಎ ಐಟಂ ನಂಬರ್ 4 ಮತ್ತು ಶೆಡ್ಯೂಲ್ ಬಿ ಐಟಂ ನಂಬರ್ 2 ರ ಆಸ್ತಿಗಳಿಗೆ ಸಂಬಂಧಿಸಿದವುಗಳು ಎಂದರೆ ಸರಿಯಲ್ಲ. ನಾನು ನನ್ನ ಹೆಂಡತಿಯ ಪರವಾಗಿಯೂ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ. 7 ನೇ ಪ್ರತಿವಾದಿ ನನಗೆ ಸಾಕ್ಷಿ ಹೇಳಲು ಅಧಿಕಾರಪತ್ರ ಕೊಟ್ಟಿಲ್ಲ. ವಾದಿಯರಿಗೆ ಹಿಸ್ಸೆಕೊಡಬಾರದು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ವಾದಿ ಈಗಲೂ ಕೂಲಿ ಕೆಲಸ ಮಾಡುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಆತ

ಬಿರ್ಲಾ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದನು ಎಂದು ಹೇಳುತ್ತಾರೆ.

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.